ವೃಷಕೇತು ಒಂದುದಿನ ಹಸ್ತಿನಾಪುರದ ಹೊರವಲಯದ ಗಂಗಾನದೀತೀರದಲ್ಲಿ ದಿಕ್ಕುದೆಸೆ ಇಲ್ಲದವನಂತೆ ಏಕಾಂಗಿಯಾಗಿ ತಿರುಗಾಡುತ್ತಿದ್ದ. ಅವನ ನಡಿಗೆಯಲ್ಲಿ ಸ್ಥಿರತೆ ಇರಲಿಲ್ಲ, ಮನಸ್ಸಿಗೆ ಮುದವಿರಲಿಲ್ಲ. ಒಂದು ಬಗೆಯ ಹತಾಶೆ ಅವನನ್ನು ಆವರಿಸಿದ ಹಾಗಿತ್ತು. ಇದು ಹೀಗಾಗಿ ಒಂದೆರಡು ದಿನಗಳಲ್ಲ, ಸುಮಾರು ಆರೆಂಟು ತಿಂಗಳುಗಳಿಂದ ಅದೇಕೋ ಉದ್ವಸ್ಥಗೊಂಡ ಮನಸ್ಸು ಗಾಳಿಗೆ ಸಿಕ್ಕ ಗಾಳಿಪಟದಂತೆ ತೊನೆದಾಡುತ್ತಲೇ ಇದೆ.

ಈ ಅನ್ಯಮನಸ್ಕತೆಯ ನಡುವೆಯೂ ಅವನು ದೂರದಲ್ಲಿ ಯಾರೋ ಒಬ್ಬ ಕುದುರೆ ಸವಾರ ತನ್ನ ಕಡೆಗೇ ಧಾವಿಸಿಬರುವುದನ್ನು ಗಮನಿಸಿದ. ಏನೊ ಕುತೂಹಲವಿಲ್ಲದೆ ಕಾದುನಿಂತ. ಬಂದವನು ಯುಯುತ್ಸು. ಒಂದು ಕಾಲಕ್ಕೆ ಹಸ್ತಿನಾಪುರ ಸಾಮ್ರಾಜ್ಯದ ಅನಧಿಕೃತ ಮಹಾರಾಜನಾಗಿ ಮೆರೆದ ಧೃತರಾಷ್ಟ್ರನ ಮಗ. ಕುರುಕ್ಷೇತ್ರ ಯುದ್ಧದ ನಂತರ ವೃಷಕೇತುವಿನ ಹಾಗೆ ಬದುಕಿ ಉಳಿದವರಲ್ಲಿ ಯುಯುತ್ಸುವೂ ಒಬ್ಬ. ನಂತರ ಪಾಂಡವರು ಅವನನ್ನು ಸೋದರನಂತೆ ಆದರಿಸಿದ್ದಾರೆ. ವೃಷಕೇತು ಅವರೆಲ್ಲರ ಪ್ರೀತಿಯ ಮಗನಾಗಿದ್ದಾನೆ.

ಯುಯುತ್ಸು ಕುದುರೆಯಿಂದಿಳಿದು ವೃಷಕೇತುವನ್ನು ಉದ್ದೇಶಿಸಿ, 'ನೀನೊಬ್ಬನೇ ಇಲ್ಲಿ ಏನು ಮಾಡುತ್ತಿದ್ದೀಯ? ಬಾ ನನ್ನ ಜತೆ. ನಾನು ನಿನಗೆ ಮಹಾರಾಜ ಯುಧಿಷ್ಠಿರನ ಕಡೆಯಿಂದ ಒಂದು ಸಂದೇಶ ತಂದಿದ್ದೇನೆ' ಎಂದ. 'ಏನದು ಸಂದೇಶ?' ವೃಷಕೇತು ಧ್ವನಿಯಲ್ಲಿ ನಿರಾಸಕ್ತಿ ಇತ್ತು.

'ಯುದ್ಧದಲ್ಲಿ ಬಂಧು ಬಳಗದವರನ್ನು, ಗುರು ಹಿರಿಯರನ್ನು ಕೊಂದ ಪಾಪದ ಪರಿಹಾರಕ್ಕಾಗಿ ಅಶ್ವಮೇಧ ಯಾಗಕ್ಕೆ ಮಹಾರಾಜ ಅಣಿಯಾಗಿರುವುದು ನಿನಗೂ ಗೊತ್ತಲ್ಲ...'

'ಹೂಂ, ಗೊತ್ತಿದೆ.'

'ಈಗ ಯಾಗದ ಕುದುರೆಯ ಜತೆ ಅರ್ಜುನ ಹೋಗುವುದೆಂದು ನಿರ್ಧಾರವಾಗಿದೆ. ಜತೆಗೆ ನೀನು ಬರಬೇಕು ಎಂಬುದು ಅರ್ಜುನನ ಅಪೇಕ್ಷೆ. ನೀನೆಂದರೆ ಅವನಿಗೆ ಅಭಿಮನ್ಯು ಜತೆಗಿದ್ದ ಹಾಗೆ.'

'ನೀನು ಬರುವುದಿಲ್ಲವೆ?'

'ನಾನಾ...' ಯುಯುತ್ಸು ಹುಸಿನಗೆಯೊಂದಿಗೆ ಹೇಳಿದ, 'ನನ್ನ ಮೈಯಲ್ಲಿ ಹರಿಯುತ್ತಿರುವುದು ರಾಜ ರಕ್ತವೇ ಆದರೂ ನಾನು ರಾಜಕುಮಾರನಲ್ಲ. ನಾನೆಷ್ಟೇ ಯುದ್ಧೋಚಿತ ವಿದ್ಯೆ ಕಲಿತಿದ್ದರೂ ನನ್ನನ್ನೂ ಯಾರೂ ಕ್ಷತ್ರಿಯನೆಂದು ಮನ್ನಿಸುವುದಿಲ್ಲ. ಏಕೆಂದರೆ ನಾನು ಕರಣ(ಕ್ಷತ್ರಿಯನಿಂದ ವೈಶ್ಯಳಿಗೆ ಜನಿಸಿದ ಮಗ) ನೋಡು– ಅದಕ್ಕೆ.'

'ಮತ್ತೆ– ನಾನಿನ್ನೇನು. ನಾನು ಸೂತ ತಾನೆ?'

'ಆದರೂ ನೀನೀಗ ಕ್ಷತ್ರಿಯರಾದ ಪಾಂಡವರ ಮಗ.'

'ಅದು ಅವರ ಸೌಜನ್ಯ. ಅವರ ಹಾಗೆ ಬೇರೆಯವರೂ ನನ್ನನ್ನು ಕ್ಷತ್ರಿಯ ಎಂದು ಮನ್ನಿಸಬೇಕಲ್ಲ! ನಾನು ಸೂತಳಾದ ವೃಷಾಲಿಯ ಮಗ ಎಂಬುದನ್ನು ಯಾರು ಮರೆತಾರು?' ಯುಯುತ್ಸುವಿನ ಮಾತನ್ನು ಒಪ್ಪಲಾರೆ ಎಂಬಂತೆ ಬೇಸರದಿಂದ ತಲೆ ಅಲುಗಿಸಿದ ವೃಷಕೇತು.

'ಇಷ್ಟೊಂದು ಪರಿತಾಪ ಏಕೆ' ಯುಯುತ್ಸು ಸಂತೈಸಿದ. 'ಮನಸ್ಸನ್ನು ಈ ಪರಿ ಕಹಿ ಮಾಡಿಕೊಳ್ಳಬೇಡ. ನನ್ನ ನೋಡು, ನನ್ನ ಅಪ್ಪ ಧೃತರಾಷ್ಟ್ರ ಯುದ್ಧ ಮುಗಿದ ವರ್ಷ ಆಗುತ್ತ ಬಂದರೂ ಇನ್ನೂ ನನ್ನನ್ನು ಶತ್ರುವಿನಂತೆಯೇ ಕಾಣುತ್ತಿದ್ದಾನೆ. ನೀನೇಕೆ ಯುದ್ಧದಲ್ಲಿ ಸಾಯಲಿಲ್ಲ ಎಂದು ಕೆರಳಿ ಕೇಳುತ್ತಾನೆ. ನಾನೇನೋ ಇಳಿವಯಸ್ಸು ತಲುಪಿದ ಅಪ್ಪನ ಸೇವೆ ಮಾಡಿ ನನ್ನ ಜನ್ಮ ಸಾರ್ಥಕಪಡಿಸಿಕೊಳ್ಳಲು ಬಯಸಿದ್ದರೆ ಅದಕ್ಕೆಲ್ಲ ಅಪ್ಪ ಅವಕಾಶವನ್ನೇ ಕೊಡುತ್ತಿಲ್ಲ. ನನಗಿಂತ ದಾಸದಾಸಿಯರೇ ಅವನಿಗೆ ಆಪ್ತರಾಗಿಬಿಟ್ಟಿದ್ದಾರೆ...' ಯುಯುತ್ಸು ಒಮ್ಮೆ ನಿಟ್ಟುಸಿರುಬಿಟ್ಟು ಮಾತು ಮುಂದುವರಿಸಿದ. 'ಒಂದು ಕಾಲಕ್ಕೆ ಅಪ್ಪ ಸಂಚು ಮಾಡಿ ಯಾರ ನಾಶಕ್ಕೆ ಯತ್ನಿಸಿದನೋ

